ಅ) ರಾಜ್ಯದಲ್ಲಿ ಎಸ್.ಎಸ್.ಎಲ್.ಸಿ. ಟಿ.ಸಿ.ಹೆಚ್. ತರಬೇತಿಯನ್ನು ಹೊಂದಿರುವ ನಿರುದ್ಯೋಗಿ ನಿರುದ್ಯೋಗಿಗಳ ಸಂಖ್ಯೆ ಎಷ್ಟು?

ಆ) ಈ ನಿರುದ್ಯೋಗಿ ಶಿಕ್ಷಕರನ್ನು 1997ರ ನೇಮಕಾತಿಯಲ್ಲಿ ನೇಮಕಾತಿ ಮಾಡಿಕೊಳ್ಳುವ ಉದ್ದೇಶ ಇದೆಯೇ, ಹಾಗಿದ್ದಲ್ಲಿ ಯಾವ ರೀತಿ ನೇಮಕ ಮಾಡಿಕೊಳ್ಳಲಾಗುತ್ತದೆ?

ಶ್ರೀ ಹೆಚ್. ಜಿ. ಗೋವಿಂದೇ ಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) 1,32,641

ಆ) 1997ನೇ ಸಾಲಿನಲ್ಲಿ ಖಾಲಿಯಾಗುವ ಹಾಗೂ ಹೊಸದಾಗಿ ಮಂಜೂರಾಗುವ ಶಿಕ್ಷಕರ ಹುದ್ದೆಗಳಿಗೆ ಅಗತ್ಯವಿರುವಷ್ಟು ಶಿಕ್ಷಕರನ್ನು ಭರ್ತಿ ಮಾಡುವಾಗ್ಗೆ ಇವರನ್ನು ಸಹಾ ಆಯ್ಕೆಗೆ ನಿಯಮಾನುಸಾರ ಪರಿಗಣಿಸಲಾಗುವುದು.

**ವೈದ್ಯಕೀಯ ಮತ್ತು ದಂತ ವೈದ್ಯಕೀಯ ಶಿಕ್ಷಣದ ಬೋಧನಾ ಶುಲ್ಕವನ್ನು ಪರಿಷ್ಕರಿಸುವುದು.**

774 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೈದ್ಯಕೀಯ ಮತ್ತು ದಂತ ವೈದ್ಯಕೀಯ ಶಿಕ್ಷಣದ ಬೋಧನಾ ಶುಲ್ಕವನ್ನು ರಾಜ್ಯ ಸರ್ಕಾರ ಪರಿಷ್ಕರಿಸಿದೆಯೇ?

ಆ) ಪರಿಷ್ಕರಿಸಿದ್ದರೆ ಶುಲ್ಕದ ಪ್ರಮಾಣ ತಿಳಿಸುವುದು?

ಇ) ಈ ನಿಗದಿ ಮಾಡಿದ ಶುಲ್ಕವು ತಿಂಗಳಿಗೆ ಎಷ್ಟು?

ಈ) ಕೇಂದ್ರ ಸರ್ಕಾರ ಹಾಗೂ ವೈದ್ಯಕೀಯ ಮಂಡಳಿಯು ಈ ಪರಿಷ್ಕರಿಸಿದ ಶುಲ್ಕವನ್ನು ನಿಗದಿಗೊಳಿಸಿದೆಯೇ ಅಥವಾ ಬೇರೆ ಶುಲ್ಕವನ್ನು ನಿಗದಿಪಡಿಸಿದೆಯೇ ತಿಳಿಸುವುದು?

ಡಾ|| ಎಂ. ಶಂಕರ್ ನಾಯಕ್ (ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು) :

ಅ) ಹೌದು.

ಆ) ಖಾಸಗಿ ವೈದ್ಯಕೀಯ ಕಾಲೇಜಿನಲ್ಲಿ ವಾರ್ಷಿಕ ರೂ. 20,000-00
ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ವಾರ್ಷಿಕ ರೂ. 8,000–00
ಖಾಸಗಿ ದಂತ ಕಾಲೇಜು ವಾರ್ಷಿಕ ರೂ. 15,000-000
ಸರ್ಕಾರಿ ದಂತ ಕಾಲೇಜು ವಾರ್ಷಿಕ ರೂ. 6,000-00

ಇ) ಬೋಧನಾ ಶುಲ್ಕವನ್ನು ವಾರ್ಷಿಕ ದರದಲ್ಲಿ ನಿಗಧಿಪಡಿಸಲಾಗಿದೆ.

ಈ) ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ ಶುಲ್ಕವನ್ನು ನಿಗಧಿಗೊಳಿಸಲಾಗಿದೆ.